† ಶ್ರೀ ವೈ. ರಾಮಕೃಷ್ಣ:—ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೊಟ್ಟರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಕೆ.ಪ್ರಭಾಕರ್ :—ಈ ಆಸ್ಪತ್ರೆಯನ್ನು ೧೬ ನೇ ತಾರೀಖಿನಿಂದ ಹೊಸ ಕಟ್ಟಡಕ್ಕೆ ಬದಲಾಯಿಸಿದ್ದೀರಿ. ಆಸ್ಪತ್ರೆಯಲ್ಲಿ ಇರಬೇಕಾದಂಥ ಅನುಕೂಲಗಳು ಇಲ್ಲದೆ ಡಿಸ್‌ಪೆನ್ಸರಿ ವರ್ಕ್ ಮಾಡುವುದಕ್ಕೆ ಏನೇನು ಅನಕೂಲಗಳನ್ನು ಮಾಡಬೇಕೋ ಅವು ಇಲ್ಲದೇ ತೊಂದರೆಯಾಗಿದೆ. ಅದನ್ನು ಸರ್ಕಾರದವರು ಸರಿಪಡಿಸಬೇಕೆಂದು ಹೇಳಿದರೆ ಒಪ್ಪುತ್ತೀರೋ?

ಶ್ರೀ ವೈ. ರಾಮಕೃಷ್ಣ:—ಅಲ್ಲಿ ಅಗತ್ಯವಾಗಿ ಏನೇನು ಇರಬೇಕೊ ಆ ಮೆಡಿಕಲ್ ಫೆಸಿಲಿಟೀಸ್ ಅಂದರೆ, ಮಿಡ್‌ವೈಫ್ಸ್, ಕ್ಲರ್ಕ್ಸ್, ಮತ್ತು ಮೆಡಿಸನ್ಸ್ ಎಲ್ಲವು ಇವೆ. ಅದು ಚೆನ್ನಾಗಿ ನಡೆಯುತ್ತಿದೆಯೆಂದು ನನಗೆ ವರ್ತಮಾನ ಬಂದಿದೆ.

ಶ್ರೀ ಕೆ.ಪ್ರಭಾಕರ್:—ಈ ಕಟ್ಟಡ ಆಸ್ಪತ್ರೆ ನಡೆಸುವುದಕ್ಕೆ ಸರಿಯಾಗಿಲ್ಲ. ಇದರ ಬಗ್ಗೆ ತುಂಬಾ ಕೊರತೆಯಾಗಿರುವುದರಿಂದ ಸೂಕ್ತ ರೀತಿಯಲ್ಲಿ ಮುಂದೆ ಈ ಆಸ್ಪತ್ರೆಯನ್ನು ನಡೆಸುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ವೈ.ರಾಮಕೃಷ್ಣ: —ತಾಲೂಕು ಬೊರ್ಡಿನವರು ಯಾವ ಕಟ್ಟಡವನ್ನು ಕಟ್ಟುತ್ತಾರೋ ಅಲ್ಲಿ ಅದನ್ನು ನಡೆಸುವುದಕ್ಕೆ ಪರ್ಮಿಷನ್ ಕೊಟ್ಟಿದ್ದೇವೆ, ಅವರಿಗೆ ೧೬ ಸಾವಿರ ರೂಪಾಯಿಗಳು ಹೊಸ ಕಟ್ಟಡಕ್ಕೆ ಸಾಕು ಎಂಬ ಅಭಿಪ್ರಾಯ ಬಂದಿದೆ.

ಶ್ರೀ ಕೆ. ಪ್ರಭಾಕರ್.—ಅಲ್ಲಿ ಇನ್ನೂ ಏನೇನು ಅನಾನುಕೂಲಗಳಿವೆಯೋ ಅವನ್ನು ಸರಿಮಾಡಿಕೊಡುತ್ತೀರಾ?

ಶ್ರೀ ವೈ. ರಾಮಕೃಷ್ಣ:—ಅಂತಹ ಅನಾನುಕೂಲಗಳು ಇದ್ದರೆ ಅವನ್ನು ಸರಿಪಡಿಸುತ್ತೇವೆ.

ಶ್ರೀ ವಿ. ಎನ್. ಪಾಟೀಲ್:—ಈಗತಾನೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ತಾಲ್ಲೂಕು ಬೋರ್ಡಿನವರು ಎಲ್ಲೆಲ್ಲಿ ಸರಿಯಾದ ಸ್ಥಳಗಳನ್ನು ಒದಗಿಸಿ ಕಟ್ಟಡಗಳನ್ನು ಒದಗಿಸಿಕೊಡುತ್ತಾರೋ ಅಲ್ಲಿ ಅವನ್ನು ಪ್ರಾರಂಭಮಾಡುವುದಕ್ಕೆ ಅಪ್ಪಣೆ ಕೊಡುತ್ತೇವೆಂದು ಹೇಳಿದರು. ಬೀದರ್ ಜಿಲ್ಲೆಯಲ್ಲಿ ಹುಮನಾಬಾದ್ ಮತ್ತು ಬೀದರ್ ಮುನಿಸಿಪಾಲಟಿಯವರಿಂದ ಸ್ಥಳ ತೆಗೆದುಕೊಳ್ಳುವುದಕ್ಕೆ ನಿಮಗೆ ಆಗುವುದಿಲ್ಲವೆಂದು ಹೇಳುತ್ತೀರಿ. ಆ ಪ್ರಿನ್ಸಿಪಲ್ಲನ್ನು ಇಲ್ಲಿಯೂ ಅಪ್ಲೈ ಮಾಡುತ್ತೀರಾ?

ಶ್ರೀ ವೈ. ರಾಮಕೃಷ್ಣ:—ಅದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

PRIMARY SCHOOL TEACHERS IN GADAG TALUK

341. Sri K. H. PATIL (Gadag)—

Will the Minister for Education be pleased to state:—

(*a*) whether any primary school teachers in Gadag Taluk are continued to work for more than three years in the same place;

(*b*) if so, their names, the places at which such teachers are working together with the special reason for their non-transfer;

(*c*) whether it has come to the notice of Government that by allowing local persons to continue in the same place, as teachers has resulted in party faction in the villages;

(*d*) if so, the action the Government propose to take for their immediate transfer?

Sri K. V. SHANKARA GOWDA (Minister for Education):—

(*a*) Yes.

(b) A statement is placed on the Table of the House.

There are no special reasons for their non-transfer.

(*c*) Not always, but the possibility is there.

(*d*) Transfers will be made in public interest as and when expedient.

* Copy placed in the Mysore Legislative library.

ಶ್ರೀ ಕೆ. ಎಚ್. ಪಾಟೀಲ್ :—ಮಂತ್ರಿಗಳು ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ಸ್ವಲ್ಪ ಸಂತೋಷ ಆದರೂ ಮಂತ್ರಿಗಳು ಒಂದೇ ತಾಲ್ಲೂಕಿನಲ್ಲಿ ನಾಲ್ಕು ವರ್ಷಗಳಿಗಿಂತ ಹೆಚ್ಚಿಗೆ ಸುಮಾರು ೨೫೯ ಉಪಾಧ್ಯಾಯರನ್ನು ವರ್ಗಮಾಡದೇ ಇಟ್ಟಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕೇವಲ ೧೫ ದಿವಸಗಳೊಳಗೆ ವರ್ಗಗಳು ಆಗಿವೆ. ನಮ್ಮ ತಾಲ್ಲೂಕಿನ ಒಬ್ಬ ಉಪಾಧ್ಯಾಯರು ಗುಂಪು ವಿರೋಧೀ ಚಟುವಟಿಕೆಗಳಿಗೆ ಕಾರಣಭೂತರಾಗಿದ್ದಾರೆಂಬುದು ನಿಜವೇ ?

ಶ್ರೀ ಕೆ. ವಿ. ಶಂಕರಗೌಡ :—ಆ ತರಹ ಕಂಪ್ಲೇಂಟ್ ನನಗೆ ಬಂದಿಲ್ಲ. ಒಂದು ವೇಳೆ ಆ ತರಹ ಕಂಪ್ಲೇಂಟ್ ಬಂದರೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

SRI K. H. PATIL :—Will the Government be pleased to take action to see that all the teachers are transferred on an equal basis without making any discrimination ?

SRI K. V. SHANKARA GOWDA : As for as possible there is no discrimination. If there are any complaints they will be looked into and if there are any valid reasons we will take necessary action.

ಶ್ರೀ ಸಿದ್ಧಯ್ಯ ಕಾಶೀಮಠ್ :—ಶಿಕ್ಷಕರನ್ನು ವರ್ಗಾಯಿಸುವುದಕ್ಕೆ ಏನಾದರೂ ನಿಯಮಗಳನ್ನು ರಚಿಸಿದ್ದೀರಾ ?

ಶ್ರೀ ಕೆ. ವಿ. ಶಂಕರಗೌಡ :—ಫೇಸ್ಡ್ ಪ್ರೋಗ್ರಾಂ ಪ್ರಕಾರ ಐದು ವರ್ಷಗಳಿಗೊಂದು ಸಾರಿ ವರ್ಗಮಾಡಬೇಕಾಗಿದೆ. ಒಂದು ವರ್ಷಕ್ಕೆ ಇಷ್ಟು ಜನ ಉಪಾಧ್ಯಾಯರನ್ನು ಒಂದೊಂದು ತಾಲ್ಲೂಕಿಗೆ ವರ್ಗಮಾಡಬೇಕೆಂದು ತೀರ್ಮಾನಮಾಡಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ : ಫೇಸ್ಡ್ ಪ್ರೋಗ್ರಾಂ ಪ್ರಕಾರ ತೀರ್ಮಾನಮಾಡಿದ್ದಾರೆಂದು ಹೇಳಿದರು. ಎಷ್ಟು ವರ್ಷಗಳಿಂದ ಈ ಫೇಸ್ಡ್ ಪ್ರೋಗ್ರಾಂ ಜಾರಿಯಲ್ಲಿದೆ ? ಈ ವರ್ಷ ಎಷ್ಟು ಜನರನ್ನು ಈ ರೀತಿ ಆಯಾ ತಾಲ್ಲೂಕುಗಳಿಗೆ ವರ್ಗಮಾಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ :—ಈ ವರ್ಷ ಶೇಕಡ ೧೫ರಷ್ಟು ಮಾಡಿದ್ದೇವೆ. ಉಳಿದುದನ್ನು ಜಾಗ್ರತೆ ಮಾಡುತ್ತೇವೆ.

SRI N. B. SIRDESAI :—May I know whether it has come to the notice of the Government that primary school teachers are being transfered to other taluks without having regard to their poor financial conditions and adverse psychological effects and thereby they are hampering and progress of education also ?

SRI K. V. SHANKARA GOWDA :—When a person joins Government service, he must be prepared to go to any place and work.

ಶ್ರೀ ಎನ್. ವಿ. ಅಗ್ನಿಹೋತ್ರಿ :—ಶಿಕ್ಷಕರನ್ನು ಅದೇ ಊರಿನಲ್ಲಿಟ್ಟುಕೊಳ್ಳಬೇಕೆಂದು ಆ ಊರಿನ ಜನರು ಕೇಳಿಕೊಂಡಾಗ ಅವರನ್ನು ಅಲ್ಲಿಯೇ ಇಡಬಹುದಲ್ಲವೇ ?

(ಉತ್ತರವಿಲ್ಲ)

ಶ್ರೀ ಎಚ್. ಸಿದ್ದವೀರಪ್ಪ :—ಯಾರನ್ನಾದರೂ ಮಾನ್ಯ ಶ್ರೀ ಅಗ್ನಿಹೋತ್ರಿಯವರು ಅಲ್ಲಿಯೇ ಇಡಬೇಕೆಂದು ಕೇಳಿದಾಗ ೧೯೭೨ನೇ ಚುನಾವಣೆಯಾಗುವವರೆಗೂ ಅಲ್ಲಿಯೇ ಇಡುತ್ತಾರೆ.

ಶ್ರೀ ಕೆ. ವಿ. ಶಂಕರಗೌಡ :—ಸರ್ಕಾರದ ಮಿಷನರಿಗೆ ಮಾನ್ಯ ಶ್ರೀ ಅಗ್ನಿಹೋತ್ರಿಯವರು ಮತ್ತು ಮಾನ್ಯ ಶ್ರೀ ಸಿದ್ದವೀರಪ್ಪನವರು ಎಂಬ ಬೇದಭಾವವಿಲ್ಲ. ಇಬ್ಬರನ್ನೂ ಒಂದೇ ಸಮನಾಗಿ ನೋಡವುದರಿಂದ ಯಾರಲ್ಲಿಯೂ ಯಾವ ವ್ಯತ್ಯಾಸವೂ ಇಲ್ಲ.

ಶ್ರೀ ಹಂಜಿ ಶಿವಣ್ಣ :—ತಾವು ಹೇಳುವ ಜನ ಬೇರೆ. ನಮ್ಮ ತಾಲ್ಲೂಕಿನಲ್ಲಿ ಸ್ಥಳೀಯ ಉಪಾಧ್ಯಾಯರನ್ನು ಆಫೀಸಿನ ಅಧಿಕಾರಿಗಳು ಬೇರೆ ತಾಲ್ಲೂಕಿಗೆ ವರ್ಗಮಾಡಿದಾಗ್ಗೆ ಒಂದು ವರ್ಷ ಹೋಗಿಲ್ಲ. ಆಮೇಲೆ ತಾನೇ ವರ್ಗಮಾಡಿಕೊಂಡು ಹೋಗಿದ್ದಾನೆ. ಅದು ಸರಿಯೇ ?

ಶ್ರೀ ಕೆ. ವಿ. ಶಂಕರೇಗೌಡ :—ಆ ಅಂಶವಾದ್ದು ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ :—ನಿಮ್ಮ ಅಧಿಕಾರಿಗಳೇ ಹಾಸನ ಜಿಲ್ಲೆಯಲ್ಲಿ ಒಂದು ಟ್ರಾನ್ಸ್‌ಫರ್ ಮಾಡಿ ಕೇವಲ ಎರಡು ತಿಂಗಳಲ್ಲಿ ಸುಮಾರು ೭೯–೮೦ ಜನ ಉಪಾಧ್ಯಾಯರನ್ನು ಪುನಃ ವರ್ಗ ಮಾಡಬೇಕೆಂದು ಆದೇಶ ಕೊಟ್ಟಿರುವುದು ಸರಿಯೇ ?

ಶ್ರೀ ಕೆ. ವಿ. ಶಂಕರಗೌಡ :—ಆ ತರಹ ಆದೇಶ ಕೊಟ್ಟಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ :—ಸರ್ಕಾರದ ನೀತಿ ಪ್ರಕಾರ ಪ್ರೈಮರಿ ಶಾಲಾ ಉಪಾಧ್ಯಾಯರುಗಳನ್ನು ಮೂರು ವರ್ಷಗಳಾದರೆ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಬೇಕೆಂದಿದೆ. ಆದರೆ ಉಪಾಧ್ಯಾಯರುಗಳು ಅದೇ ಊರಿನಲ್ಲಿ ಹುಟ್ಟಿ, ಅದೇ ಊರಿನಲ್ಲಿ ಬೆಳೆದು ಕೆಲಸಮಾಡುವವರು ಬಹಳ ಮಂದಿ ಇದ್ದಾರೆ. ಇಂತಹ ಕಡೆಗಳಲ್ಲಿ ರಾಜಕೀಯ ಚಟುವಟಿಕೆಗಳು ಬಹಳವಾಗಿ ನಡೆಯುತ್ತಿವೆ. ಅದನ್ನು ತಪ್ಪಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ :—ರಾಜಕೀಯ ಚಟುವಟಿಕೆಗಳಲ್ಲಿ ನಿರತರಾಗಿರುವವರ ಮೇಲೆ ಏನಾದರೂ ಹಾಗೆ ದೂರುಗಳು ಬಂದರೆ, ಅದನ್ನು ಪರಿಶೀಲಿಸಿ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ.

1-30 P. M.

ಶ್ರೀ ಕೆ. ಎಚ್. ಪಾಟೀಲ್ :—ವೆಂಕಟಾಪುರದ ಬಿಳಿಗಿ ಟೀಚರ್ ಬಗ್ಗೆ ಅನೇಕ ದೂರುಗಳು ಬಂದಿವೆ. ಅವರ ವಿಚಾರದಲ್ಲಿ ನೇರವಾಗಿ ನಾವು ತಮ್ಮಕಡೆ ಬರಬೇಕೆಂದು ಅಪೇಕ್ಷೆ ಮಾಡದೆ, ೪ ವರ್ಷಕ್ಕಿಂತಲೂ ಮೇಲೆ ಅವರು ಅಲ್ಲಿ ಇರುವುದರಿಂದ, ಅವರನ್ನು ತೀವ್ರವಾಗಿ ತಾವಾಗಿಯೇ, ತಮ್ಮ ಇಲಾಖೆಯ ಅಧಿಕಾರಿಗಳ ಮೂಲಕ ಟ್ರಾನ್ಸ್‌ಫರ್ ಮಾಡುತ್ತೀರಾ ? ತಮ್ಮ ಪಕ್ಷದ ಒಬ್ಬ ಎಂ. ಎಲ್. ಸಿ. ಯವರು ಒಮ್ಮೆ ಟ್ರಾನ್ಸ್‌ಫರ್ ಮಾಡಿದ್ದನ್ನು ಪುನಃ ಟ್ರಾನ್ಸ್‌ಫರ್ ಮಾಡುವ ಹಾಗೆ ಹಸ್ತಕ್ಷೇಪ ಮಾಡಿದ್ದಾರೆ. ಆದ್ದರಿಂದ ಇದನ್ನು ನಿಮ್ಮ ಅಧಿಕಾರಿಗಳ ಮೂಲಕವೇ ಒಂದು ಉಚ್ಚ ಆರ್ಡರ್ ಮಾಡಿಸಿ ಅವರನ್ನು ಟ್ರಾನ್ಸ್‌ಫರ್ ಮಾಡಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ :—ಅದೇ ರೀತಿ ನಾವು ಮಾಡುತ್ತಾ ಇರುವುದು. ಕೆಲವು ಸಲ ಎಂ.ಎಲ್.ಸಿ ಗಳು ಎಂ.ಎಲ್.ಎ.ಗಳು ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಬೇಕೆಂದು ಬರುತ್ತಾರೆ. ಇದು ಬಹಳ ಕಷ್ಟವಾದ ಪರಿಸ್ಥಿತಿ. ಕೆಲವು ಪರಿಸ್ಥಿತಿಗಳಲ್ಲಿ ಅವರನ್ನು ಅಲ್ಲಿ ಇಡಬೇಕಾಗುತ್ತದೆ. ಯಾರು ತಮ್ಮ ಕೆಲಸಕಾರ್ಯಗಳನ್ನು ತೃಪ್ತಿಕರವಾಗಿ ಮಾಡುತ್ತಿದ್ದಾರೋ, ಅವರನ್ನು ಅಲ್ಲೇ ಇಡಬಹುದು. ಆದರೆ ಯಾರು ತಂಟೆಕೋರರಾಗಿರುತ್ತಾರೋ, ಅವರನ್ನು ವರ್ಗಾವಣೆ ಮಾಡಬೇಕಾಗುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ :- ಮಕ್ಕಳು ಜ್ಞಾನಾರ್ಜನಮಾಡಿ ಮುಂದೆ ಒಳ್ಳೆಯ ಪ್ರಜೆಗಳಾಗಬೇಕೆಂಬುದು ಶಿಕ್ಷಣ ಇಲಾಖೆಯ ಧೋರಣೆ. ಇತ್ತೀಚೆಗೆ ತಾವು ಮಂತ್ರಿಗಳಾದ ಮೇಲೆ ಆ ರೀತಿಯಾಗ ಬಹುದೆಂದು ಭಾವಿಸಿದ್ದೆವು. ಆದರೆ ಅದು ಆಗಿಲ್ಲ. ಒಂದೇ ಒಂದು ಉಪಾಧ್ಯಾಯನನ್ನು ಒಂದು ವರ್ಷದಲ್ಲಿ ಮೂರು ನಾಲ್ಕು ಬಾರಿ ವರ್ಗ ಮಾಡಿರತಕ್ಕ ದೃಷ್ಟಾಂತಗಳಿವೆ, ಮತ್ತು ೨೫ ವರ್ಷಗಳ ವರೆಗೂ ಒಂದೇ ಕಡೆಯಲ್ಲಿ ಒಬ್ಬ ಉಪಾಧ್ಯಾಯನನ್ನು ಇಟ್ಟಿರುವ ಉದಾಹರಣೆ ಇದೆ. ಇದರ ಬಗ್ಗೆ ಇದನ್ನು ಸುಧಾರಣೆ ಮಾಡಲು ತಾವು ಏನು ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ :—ಇಂತಹ ವಿಷಯಗಳನ್ನು ಶ್ರೀಮಾನ್ ದೊಡ್ಡಬೋರೆಗೌಡರು ಗಮನಕ್ಕೆ ತಂದರೆ ನಿಜವಾಗಿಯೂ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

TAKING OVER OF PRIMARY SCHOOLS RUN BY PRIVATE MANAGEMENTS

347. SRI R. G. WALI (Hubli).—

Will the Minister for Education be pleased to state :—

(*a*) when the final decision to regroup zone or districts for administrative convenience in the matter of taking over Primary schools run by private management by Government will be taken ;

(*b*) whether rent due to the owners of the buildings occupied by the Primary schools belonging to Private Individuals or to the Municipalities have been paid;

(*c*) if not, when the same will be paid ?

SRI K. V. SHANKARA GOWDA (Minister for Education):—

(*a*) Government have not taken over all schools run by private management. As regards reorganisation and strengthening of Inspectorate of Department of Public Instruction, orders have been issued on 22nd June 1970.